**ಓ.ಎಸ್ ನಂ. 45/2021** **ಪಿ.ಡಬ್ಲ್ಯೂ-3**

**ಸಾಕ್ಷಿಯನ್ನು ದಿನಾಂಕ 9.6.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಎನ್.ಎನ್ ಪರ ವಕೀಲರಿಂದಃ

ನಾನು ಮುಳ್ಳೂರು ಗ್ರಾಮದವನೆಂದರೆ ಸರಿ. ವಾದಿ ಮುಳ್ಳುರು ಗ್ರಾಮದಲ್ಲಿ ವರ್ಕ್ ಶಾಪ್ ನ್ನು ನಡೆಸುತ್ತಾರೆಂದರೆ ಸರಿ. ಅವರು ನನಗೆ 25 ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ವ್ಯವಸಾಯ ಎಂದು ಬರೆಸಿರುತ್ತೇನೆ. ವಾದಿ ಮತ್ತು ಪ್ರತಿವಾದಿ ಮಾವ ಮತ್ತು ಅಳಿಯರಾಗಿರುತ್ತಾರೆ. ವಾದಿ ಪ್ರತಿವಾದಿಯು ನನ್ನ ಸಂಬಂಧಿಕರಾಗಿರುವುದಿಲ್ಲ ಮತ್ತು ನನ್ನ ಜನಾಂಗದವರು ಆಗಿರುವುದಿಲ್ಲ. ವಾದಿ ಪ್ರತಿವಾದಯ ಮನೆಯಲ್ಲಿ ಏನೇನು ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕ್ರಯಪತ್ರ ನೋಂದಣಿಯ ಸಮಯದಲ್ಲಿ ನಾನು ನೋಂದಣಿ ಕಚೇರಿಗೆ ಹೋಗಿರುವುದಿಲ್ಲ ಮತ್ತು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಿಪಿ 1 ಕ್ರಯಪತ್ರವನ್ನು 23 ಲಕ್ಷಕ್ಕೆ ನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಲಾಗಿರುತ್ತದೆ. ನೋಂದಣಿ ಕಚೇರಿಯಲ್ಲಿ ಎಷ್ಟು ಹಣ ಕೊಟ್ಟಿರುತ್ತಾರೆಂದು ನಾನು ನೋಡಿರುವುದಿಲ್ಲ. ಮನೆಯ ಮಾರಾಟದ ಮಾತುಕತೆಯು ಸರಗೂರಿನ ಸೋಮೇಶ್ವರ ದೇವಸ್ಥಾನದ ಹತ್ತಿರ ಆಗಿರುತ್ತದೆ. ಸದರಿ ಸಮಯದಲ್ಲಿ ವಾದಿ, ನಾನು ಮತ್ತು ಪಕ್ಕದ ಊರಿನ ಇನ್ನೊಬ್ಬರು ಡಿದ್ದರು ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಆ ರೀತಿ ಯಾವುದೇ ಮಾತು ಕತೆ ಆಗಿರುವುದಿಲ್ಲ, ಆ ಸಮಯದಲ್ಲಿ ನಾನು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ವಾದಿಯು ಹೇಳಿ ಬರೆಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು, ನಾನು ಮತ್ತು ವಾದಿ ಒಂದೇ ಊರಿನಲ್ಲಿ ಕೆಲಸ ಮಾಡುವುದರಿಂದ ವಾದಿಗೇ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.